# ಮತ-ಮತಿಗಳ ಸಾಮರಸ್ಯದ ತಾಣವಾಗಿ 'ಮುತ್ತತ್ತಿ'

**ಹೇಮಲತ ಪಿ. ಎನ್.**
ನಂ.1156, 4/10ನೆ ಮುಖ್ಯರಸ್ತೆ, ಇ & ಎಫ್ ಬ್ಲಾಕ್, ರಾಮಕೃಷ್ಣನಗರ,
ಮೈಸೂರು.

**DOI: https://doi.org/10.5281/zenodo.13284003**

**ABSTRACT:**

ಪ್ರಾಚೀನ ಕಾಲದಿಂದಲೂ ಕನ್ನಡ ನಾಡಿನಲ್ಲಿ ಸಾಮರಸ್ಯವನ್ನು ಪ್ರತಿಬಿಂಬಿಸುವ ಅನೇಕ ಘಟನೆಗಳು ನಡೆಯುತ್ತಾ ಬಂದಿವೆ; ಅನೇಕ ಸ್ಥಳಗಳು ರೂಪುಗೊಂಡಿವೆ. ಸಂತ ಸಮುದಾಯವು ಸಾಮಾಜಿಕ ಸಾಮರಸ್ಯಕ್ಕಾಗಿ ಬೋಧಿಸುತ್ತಾ ನಡೆದು ಕನ್ನಡ ಸಂಸ್ಕೃತಿಯಲ್ಲಿ ಬಹುದೊಡ್ಡ ಕ್ರಾಂತಿಯನ್ನುಂಟುಮಾಡಿರುವುದು ಚಾರಿತ್ರಿಕ ಸಂಗತಿಯಾಗಿದೆ. ದಕ್ಷಿಣ ಕರ್ನಾಟಕದ ಮೇರುಸಂತರೂ ಧರೆಗೆ ದೊಡ್ಡವರೂ ಆದ ಶ್ರೀಮಂಟೇಸ್ವಾಮಿ ಅವರ ಪ್ರಭಾವದಿಂದಾಗಿ ಸಾಮಾಜಿಕ ಸ್ವಾಸ್ಥ್ಯವೂ ಸಾಮರಸ್ಯವೂ ಸಾಧಿತಗೊಂಡು ಇಂದಿಗೂ ಜನಸಮುದಾಯಗಳು ಒಕ್ಕಲಾಗಿ ನಡೆದುಕೊಳ್ಳುತ್ತಿದ್ದಾರೆ. ಮಂಟೇಸ್ವಾಮಿ ಪರಂಪರೆಯು ಮೂಲತಃ ಶೈವಮೂಲದ್ದಾದರೂ ವೈಷ್ಣವಮೂಲದ ಮುತ್ತತ್ತಿರಾಯನೊಂದಿಗೆ ಏರ್ಪಟ್ಟ ಸಾಮರಸ್ಯವು ಮಹೋನ್ನತವಾದುದು. ಇದರೊಂದಿಗೆ ಪ್ರಾಕೃತಿಕವಾದ ಶ್ರೀಮಂತ ಸೊಬಗನ್ನು ಹೊಂದಿರುವ ಮುತ್ತತ್ತಿ ತಾಣವು ಮತ-ಮತಿಗಳ ಸಾಮರಸ್ಯದ ನೆಲೆಯಾಗಿ ಇಂದಿಗೂ ಬಹುಜನರನ್ನು ನಿರಂತರವಾಗಿ ಆಕರ್ಷಿಸುತ್ತಿರುವುದು ಕನ್ನಡ ನೆಲದ ಹೆಮ್ಮೆಯಾಗಿದೆ.

**KEYWORDS:**

ಮುತ್ತೆತ್ತರಾಯ, ಮಂಟೇಸ್ವಾಮಿ, ಸಿದ್ದಪ್ಪಾಜಿ, ರಾಮ, ಸೀತೆ, ಆಂಜನೇಯ, ಕಾವೇರಿ ನದಿ, ಮುತ್ತಿನ ಮೂಗುತಿ, ಶೈವ-ವೈಷ್ಣವ.

'ಮುತ್ತತ್ತಿ' ಎಂಬ ಸ್ಥಳವು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಹಲಗೂರು ಹೋಬಳಿಯಲ್ಲಿರುವ ಪುಟ್ಟ ಗ್ರಾಮವಾಗಿದೆ. ಇಲ್ಲಿ 'ಮುತ್ತೆತ್ತರಾಯ'ನೆಂದು ಪ್ರಸಿದ್ಧನಾದ ಹನುಮಂತರಾಯನ ದೇವಸ್ಥಾನವಿದ್ದು ಪ್ರಸಿದ್ಧ ಯಾತ್ರಾ ಸ್ಥಳ ಹಾಗೂ ಪ್ರವಾಸಿ ತಾಣವಾಗಿದೆ. ಕರ್ನಾಟಕದ ರಾಜ್ಯಧಾನಿ ಬೆಂಗಳೂರಿನಿಂದ 98 ಕಿಲೋಮೀಟರ್, ಮೈಸೂರಿನಿಂದ 87 ಕಿಲೋಮೀಟರ್, ಮಂಡ್ಯದಿಂದ 60 ಕಿಲೋಮೀಟರ್ ಹಾಗೂ ಮಳವಳ್ಳಿಯಿಂದ 45 ಕಿಲೋಮೀಟರ್ ಅಂತರದಲ್ಲಿದೆ.

ಕಾವೇರಿ ನದಿಯ ಹರಿವಿನ ಸುಂದರ ಪ್ರಕೃತಿ ಸೌಂದರ್ಯದೊಂದಿಗೆ ಇದು ಕಂಗೊಳಿಸುತ್ತದೆ. ಸುತ್ತಮುತ್ತಲು ಹಸಿರಿನಿಂದಾವೃತ್ತವಾದ ಬೆಟ್ಟಗುಡ್ಡಗಳ ಅರಣ್ಯ, ನಡುವೆ ವೈಯ್ಯಾರದಿಂದ ಹರಿವ ಕಾವೇರಿ ನದಿ, ಕಿವಿಗೆ ಇಂಪನೀವ ಹಕ್ಕಿಕಗಳ ಕಲರವ, ಕಣ್ಮನ

ತುಂಬುವ ಆನೆ ಮೊದಲಾದ ಜೀವಸಂಕುಲದ ವೈವಿಧ್ಯತೆ-ಇವುಗಳ ನಡುವೆ ಜನಮನ ತಣಿಸುವ ತಾಣವಾಗಿ ಅರಳಿದೆ ಮುತ್ತತ್ತಿ. ಹುಲಿ, ಚಿರತೆ, ಕರಡಿ, ಕಾಡೆಮ್ಮೆ, ಕಾಡುಕೋಣ, ಕಾಡುಹಂದಿ, ವಿವಿಧ ತಳಿಯ ಅಳಿಲು, ಜಿಂಕೆ ಮುಂತಾದ ಪ್ರಾಣಿಗಳು ಮುತ್ತತ್ತಿ ಸುತ್ತಲಿನ ಕಾಡಿನಲ್ಲಿ ನೆಲೆಸಿವೆ. ಇದು ಕಾಯ್ದಿರಿಸಿದ ಕಾಡಾಗಿದ್ದು, ದೇಶದಲ್ಲಿ ಅತಿ ಹೆಚ್ಚು ಕಾಡು ಆನೆಗಳ ಸಾಂದ್ರತೆಯನ್ನು ಹೊಂದಿರುವ ಕಾರಣ ಇದನ್ನು "ಎಲಿಫೆಂಟ್ ಕಾರಿಡಾರ್" ಎಂದೂ ಕರೆಯುತ್ತಾರೆ. ಇಂತಹ ಪ್ರಾಕೃತಿಕ ಸೌಂದರ್ಯದ ಮೂಲಕ ಮುತ್ತತ್ತಿಯು ಯಾತ್ರಿಗಳಿಗೆ ಹಾಗೂ ಚಾರಣಪ್ರಿಯರಿಗೆ ಸಂತಸ ಮೂಡಿಸುತ್ತದೆ. ಅದಕ್ಕೆಂದೇ ಅತೀ ಹೆಚ್ಚಿನ ಪ್ರಮಾಣದ ಚಾರಣಪ್ರಿಯರು ಇಲ್ಲಿಗೆ ಬರುತ್ತಾರೆ. ಅರಣ್ಯ ಇಲಾಖೆಯ ಅನುಮತಿಯೊಂದಿಗೆ ಈ ಅರಣ್ಯದಲ್ಲಿ ಪ್ರವಾಸಿಗರು ಚಾರಣ ಕೈಗೊಳ್ಳುತ್ತಾರೆ.

ಮುತ್ತತ್ತಿ ಸಮೀಪದಲ್ಲೇ ಇರುವ ಮತ್ತೊಂದು ಪ್ರವಾಸಿ ತಾಣವಾದ 'ಸೊಲಿಗೆರೆ ಬೆಟ್ಟ'ವು ಸಮುದ್ರ ಮಟ್ಟದಿಂದ 1125 ಮೀಟರ್‌ನಷ್ಟು ಎತ್ತರದಲ್ಲಿದ್ದು, ಈ ಬೆಟ್ಟದಿಂದ ಸುತ್ತಲಿನ ಪ್ರಕೃತಿ ಸೌಂದರ್ಯವನ್ನು ಕಣ್ತುಂಬಿಕೊಳ್ಳಬಹುದಾಗಿದೆ. ಇಲ್ಲಿಂದ ಚಾರಣ ಮಾಡುತ್ತ ನಿಸರ್ಗಸೌಂದರ್ಯವನ್ನು ಕಣ್ತುಂಬಿಕೊಳ್ಳುತ್ತಾ 'ಭೀಮೇಶ್ವರಿ' ಮತ್ತು 'ಸಂಗಮ' ತಲುಪಬಹುದು. ಹೀಗಾಗಿಯೇ, ಮಂಡ್ಯ, ಮೈಸೂರು, ಚಾಮರಾಜನಗರ, ಬೆಂಗಳೂರು ಮಾತ್ರವಲ್ಲದೇ ಅಕ್ಕಪಕ್ಕದ ತಮಿಳುನಾಡು, ಕೇರಳ ಮೊದಲಾಗಿ ಅಸಂಖ್ಯ ಜನರಿಗೆ ಮುತ್ತತ್ತಿಯು ಜನಪ್ರಿಯ ಪ್ರವಾಸಿ ಹಾಗೂ ಚಾರಣ ತಾಣವಾಗಿದೆ. ಪ್ರವಾಸಿಗರು ಇಲ್ಲಿ ಪ್ರಕೃತಿ ಸೌಂದರ್ಯ, ಮುತ್ತೆತ್ತರಾಯನ ದರ್ಶನ, ಕಾವೇರಿ ನದಿ ಹರಿವು, ಅರಣ್ಯದ ಜೀವವೈವಿಧ್ಯತೆ ಹಾಗೂ ಚಾರಣ ಸಾಹಸವನ್ನು ಆನಂದಿಸಬಹುದಾಗಿದೆ.

ಇಂಥ ಅತ್ಯಾಕರ್ಷಕ ಪ್ರಾಕೃತಿಕ ತಾಣವು ಸಾಂಸ್ಕೃತಿಕ ಹಾಗೂ ಧಾರ್ಮಿಕ ಸಾಮರಸ್ಯದ ತಾಣವಾಗಿ ರೂಪುಗೊಂಡ ಕಥಾನಕವು ಚಿತ್ತಾಕರ್ಷಕವಾದುದು. ಈ ತಾಣಕ್ಕೆ 'ಮುತ್ತತ್ತಿ' ಅಥವಾ 'ಮುತ್ತೆತ್ತಿ' ಎಂಬ ಹೆಸರು ಹೇಗೆ ಬಂದಿತು? ಇಲ್ಲಿನ 'ಮುತ್ತೆತ್ತರಾಯ' ಯಾರು? ಇಲ್ಲಿಗೆ ಹೇಗೆ ಬಂದ? ಎಂದು ವಿಚಾರಿಸಿ ನೋಡಿದರೆ, ಮೊದಲಿಗೆ 'ಮುತ್ತೆತ್ತರಾಯನ ಪೌರಾಣಿಕ ಪ್ರಸಂಗ'ವೊಂದು ಜನಮಾನಸದಲ್ಲಿರುವುದು ಗೋಚರವಾಗುತ್ತದೆ. ಜನಸಮುದಾಯದ ನಂಬಿಕೆಯ ಪ್ರಕಾರ, ಮುತ್ತತ್ತಿ ಹೆಸರು ಬಂದುದಕ್ಕೆ ಹಾಗೂ ಮುತ್ತೆತ್ತರಾಯನು ಇಲ್ಲಿ ನೆಲೆಸಿರುವುದಕ್ಕೆ ಒಂದು ಪೌರಾಣಿಕ ಕಥಾನಕದ ಹಿನ್ನೆಲೆಯಿದೆ. ಮುತ್ತತ್ತಿಯು ಪೌರಾಣಿಕ ಮಹಾಕಾವ್ಯವಾದ ರಾಮಾಯಣದಲ್ಲಿ ಬರುವ ಒಂದು ಪ್ರದೇಶವಾಗಿದೆ ಎಂಬ ಪ್ರತೀತಿ ಇದೆ:

ರಾಮಾಯಣದ ಕಾಲದಲ್ಲಿ, ರಾಮನು ಸೀತೆ, ಲಕ್ಷ್ಮಣ ಹಾಗೂ ಆಂಜನೇಯರ ಸಹಿತ ಲಂಕೆಯಿಂದ ಅಯೋಧ್ಯೆಗೆ ಹಿಂದಿರುಗುವಾಗ ಕನ್ನಡ ನೆಲದ 'ಬಸವನ ಬೆಟ್ಟ' ಅರಣ್ಯ ಪ್ರದೇಶದ ಪ್ರಕೃತಿ ಸೌಂದರ್ಯಕ್ಕೆ ಮನಸೋತು ಒಂದು ದಿನ ಇಲ್ಲೇ ತಂಗಿ ಹೋಗಲು ನಿರ್ಧರಿಸುತ್ತಾರೆ. ಮರುದಿನ ಬೆಳಗ್ಗೆ ಕಾವೇರಿ ನದಿ ತೀರದಲ್ಲಿರುವ ತಿರುಗಣೆ ಮಡುವಿನಲ್ಲಿ ಕುಳಿತು ಸೀತೆಯು ಸ್ನಾನ ಮಾಡುತ್ತಿದ್ದಾಗ ಸೀತೆಯ ಮುತ್ತಿನ ಮೂಗುತಿಯು ಕಾವೇರಿ ನದಿಯಲ್ಲಿ ಬಿದ್ದು ಹೋಗುತ್ತದೆ. ಈ ಸಂಗತಿಯು ರಾಮನಿಗೆ ತಿಳಿದು, ಅಲ್ಲೇ ಇದ್ದ

ಹನುಮಂತನಿಗೆ ನೀರಿನಲ್ಲಿದ ಬಿದ್ದ ಮೂಗುತಿಯನ್ನು ಹುಡುಕಲು ಆಜ್ಞಾಪಿಸುತ್ತಾನೆ. ಆಗ ರಾಮಭಂಟನಾದ ಹನುಮಂತನು ತನ್ನ ಬಾಲವನ್ನು ನೀರಿನಲ್ಲಿ ತಿರುಗಿಸಿ ನೀರಿನಲ್ಲಿ ಕಳೆದುಹೋಗಿದ್ದ ಮುತ್ತಿನ ಮೂಗುತಿಯನ್ನು ಹುಡುಕಿ ಸೀತೆಗೆ ನೀಡುತ್ತಾನೆ. ಹನುಮಂತನು ತನ್ನ ಬಾಲವನ್ನು ನೀರಿನಲ್ಲಿ ತಿರುಗಿಸಿದ ರಭಸಕ್ಕೆ ಆ ಜಾಗದಲ್ಲಿ ಇಂದಿಗೂ ಕಾವೇರಿ ನದಿಯ ನೀರು ಒಂದು ಸುತ್ತು ತಿರುಗಿ ಹೋಗುತ್ತದೆ. ಆದಕಾರಣ ಆ ಸ್ಥಳಕ್ಕೆ 'ತಿರುಗಣೆಮಡು' ಎಂದು ಕರೆದು ಪ್ರಸಿದ್ದಿಯಾಗಿದೆ ಎನ್ನಲಾಗುತ್ತದೆ. ಇತ್ತ ಹನುಮಂತನು ಸೀತೆಗೆ ಮುತ್ತಿನ ಮೂಗುತಿಯನ್ನು ತನ್ನ ಬಾಲದಲ್ಲಿ ಎತ್ತಿಕೊಟ್ಟಿದ್ದಕ್ಕಾಗಿ ಸೀತೆಯು ಹನುಮಂತನಿಗೆ ಕೊಟ್ಟ ಹೆಸರೇ 'ಮುತ್ತೆತ್ತರಾಯ'ನೆಂದು. ಜೊತೆಗೆ ಹನುಮಂತನು ಈ ಕ್ಷೇತ್ರದಲ್ಲಿ 'ಮುತ್ತೆತ್ತರಾಯ'ನಾಗಿ ನೆಲೆಸುವಂತಾಗಲಿ ಹಾಗೂ ಈ ಕ್ಷೇತ್ರಕ್ಕೆ 'ಮುತ್ತತ್ತಿ' ಎಂದು ಹೆಸರಾಗಲಿ ಈಗ ಎಂದು ಹರಸಿದ ಕರಣದಿಂದ ಈ ಸ್ಥಳವನ್ನು 'ಮುತ್ತತ್ತಿ'ಯೆಂದೂ 'ಮುತ್ತೆತ್ತರಾಯನ ಸುಕ್ಷೇತ್ರ'ವೆಂದು ಕರೆಯುವುದು ರೂಢಿಗೆ ಬಂದಿದೆ ಎಂಬುದು ಪುರಾಣಪ್ರೇರಿತ ಹಿನ್ನೆಲೆಯಾಗಿದೆ.

ಇದೇ ಪೌರಾಣಿಕ ಸಂಗತಿಯನ್ನು ಹೋಲುವಂಥ ಜಾನಪದ ಕಥಾನವನ್ನು 'ಮಂಟೇಸ್ವಾಮಿ ಮಹಾಕಾವ್ಯ'ದಲ್ಲಿಯೂ ಕಾಣಬಹುದಾಗಿದೆ. ಧರೆಗೆ ದೊಡ್ಡವರಾದ ಶ್ರೀ ಮಂಟೇಸ್ವಾಮಿ ಅವರ ಆಜ್ಞೆಯ ಮೇರೆಗೆ ಶಿಷ್ಯ ಸಿದ್ದಪ್ಪಾಜಿ ಅವರು ಕಬ್ಬಿಣ ಭಿಕ್ಷೆಗಾಗಿ ಹಲಗೂರಿನ ಪಾಂಚಾಳರ ಬಳಿ ಬರುತ್ತಾರೆ. ಪಾಂಚಾಳರು ಒಡ್ಡಿದ 'ಅಂಗೈಯಲ್ಲಿ ಕಾದ ಕಬ್ಬಿಣ ಹಿಡಿವ ಪವಾಡ' ಮಾಡಿದರೂ ಬಂಧನಕ್ಕೆ ಒಳಗಾಗಿ ಶಕ್ತಿಹೀನನಾದಂತಾಗುತ್ತಾರೆ. ಆಗ ಮಂಟೇಸ್ವಾಮಿ ಅವರು ತಮ್ಮ ಶಿಷ್ಯನ ಪರಿಸ್ಥಿತಿಯನ್ನು ಅರಿತು ಶಕ್ತಿಸಂಚಯನಕ್ಕಾಗಿ 'ಮುತ್ತತ್ತಿರಾಯ'ನನ್ನು ಭೇಟಿ ಮಾಡಲು ತಿಳಿಸುತ್ತಾರೆ. ಗುರುವಿನ ಸೂಚನೆಯಂತೆ, ಮುತ್ತತ್ತಿಗೆ ಬಂದು ಮುತ್ತತ್ತಿರಾಯನನ್ನು ಮುಖಾಮುಖಿಯಾದ ಸಿದ್ಧಪ್ಪಾಜಿ ಅವರು, ಮುತ್ತತ್ತಿರಾಯ ನಾಮದ ಹಿನ್ನೆಲೆಯನ್ನು ಕುರಿತು ವಿಚಾರಿಸುತ್ತಾರೆ. ಆಗ ಮುತ್ತತ್ತಿರಾಯನು ಹೇಳುವ ತನ್ನ ಕಥನವೆಂದರೆ;-

**ನಾ ಅಂಜಣದೇವಿಯ ಕುಮಾರ**
**ನೀಲವೇಗದ ಸಂಜೀವ**
**ರಾಮದೇವರ ಬಂಟ**
**ರಾವಳನ ವೈರಿ ನಾನು**
**ಲೆಂಕೆದಾರಾಂತರನೆಲ್ಲ**
**ಧಾಮಧೂಮು ಮಾಡಿಬಿಟ್ಟು**
**ನನ್ನ ಬಾಲದಲ್ಲಿ ಕಟ್ಟಿಹರ ವಿದನೆಲ್ಲ**
**ನಮ್ಮ ಪಟ್ಟದ ಸೀತಮ್ಮನವರ**
**ಸೆರೆಯ ಬಂಧಬಿಡಿಸಿಕಂಡು**
**ನಮ್ಮ ಪಟ್ಟದ ಸೀತಮ್ಮನವರು**
**ಸಮುದ್ರದ ಕರೆಯ ಒಳಗೆ**
**ತಾನ ಮಾಡೋ ಯಾಳ್ಯದಲ್ಲಿ**

**ನಮ್ಮ ತಾಯಿಯ ಕೊರಳಿನ ಪದಕ ಕಿತ್ತು**

**ಸಮುದ್ರಕ್ಕೆ ಬಿದ್ದು ಹೋಯಿತು ಸ್ವಾಮಿ**
**ನಮ್ಮ ತಾಯಿ ಸೀತಮ್ಮನವರ ತಿರುದುಕ್ಕ ನೋಡಿ**
**ಸಮುದ್ರದ ಉದ್ದಕ್ಕೂ ಬಾಲನೀಡಿ**
**ಬಾಲದಲ್ಲಿ ಎತ್ತಿ ಕೊಟ್ಟೆ**
**ಮುತ್ತುರಾಯ ಎನ್ನುವ ಹೆಸರ ಕೊಟ್ಟರು**
**ಅಡವಿನಿದ್ರೆ ಕೊಟ್ಟರು**
**ಅರಣ್ಯ ತಬಸ ಕೊಟ್ಟರಯ್ಯೋ....(ಮಂಟೇಸ್ವಾಮಿ ಕಾವ್ಯ; ಪುಟ 129-130)**

ಹೀಗೆ, ಶಿಷ್ಟ ಪರಂಪರೆ ಹಾಗೂ ಜಾನಪದ ಪರಂಪರೆಯಲ್ಲಿ ಮುತ್ತತ್ತಿ ಸ್ಥಳದ ಬಗ್ಗೆ ಕಾಣಸಿಗುವ ಕಥಾನಕಗಳಿವು.

ಕನ್ನಡದ ಮೇರುನಟ ಮೂಲ ಮುತ್ತುರಾಜ್ ನಾಮಾಂಕಿತರಾಗಿದ್ದ ಡಾ. ರಾಜ್‌ಕುಮಾರ್ ಅವರು ಈ ಪೌರಾಣಿಕ ಕಥಾನಕ ಸಂಬಂಧವಾಗಿ ಹಾಡಿರುವ ಹಾಡೊಂದು ತುಂಬಾ ಜನಪ್ರಿಯತೆಯನ್ನು ಪಡೆದುಕೊಂಡಿದೆ. ಈ ಗೀತೆಯ ರಚನಾಕಾರರು ಚಿ.ಉದಯಶಂಕರ್. ಸಂಗೀತ ನಿರ್ದೇಶನ ಉಪೇಂದ್ರಕುಮಾರ್ ಅವರದ್ದು.

**ಎತ್ತಲೋ ಮಾಯವಾದ ಮುತ್ತಿನ ಮೂಗುತಿ ನೀನು**
**ಎತ್ತಿ ತಂದೆ ಎಲ್ಲಿಂದ ರಾಯ ಮುತ್ತತ್ತಿ ರಾಯ**
**ಅತ್ತ ಸೀತಮ್ಮನ ಮುದ್ದು ಮೊಗದಲ್ಲಿ ಮತ್ತೆ**
**ನಗೆಯಾ ತಂದೆಯಾ ಮಹನೀಯಾ ಮಾರುತಿ ರಾಯ||**

ಹೀಗೆ ಹಾಡು ಮುಂದುವರೆಯುತ್ತದೆ.

ಪೌರಾಣಿಕ ಕಥಾನಕÀಗಳು ಏನೇ ಇದ್ದರೂ ಪ್ರಾಕೃತಿಕವಾಗಿ 'ಮುತ್ತತ್ತಿ'ಯು ಆಕರ್ಷಕವಾದ ತಾಣವಾಗಿರುವುದನ್ನು ಎಲ್ಲರ ಸರ್ವರ ಅನುಭವಕ್ಕೂ ಬರುವಂಥದ್ದು. ಭಾಷಾತಜ್ಞರು ಹಾಗೂ ನಿಸರ್ಗತಜ್ಞರ ಪ್ರಕಾರ, "ಮುತ್ತತಿ" ಎಂಬ ಹೆಸರು ಎರಡು ಕನ್ನಡ ಪದಗಳಿಂದ ಬಂದಿದೆ - "ಮುತ್ತು" ಅಂದರೆ "ಮುತ್ತುಗಳು" ಮತ್ತು "ತಿ" ಎಂದರೆ "ಸಿಂಪಡಣೆ". ಮುತ್ತತ್ತಿ ಗ್ರಾಮವು ಕಾವೇರಿ ನದಿಯ ಎಡದಂಡೆಯಲ್ಲಿದ್ದು, ಈ ಪ್ರದೇಶದಲ್ಲಿನ ಬಂಡೆಗಳ ಮೇಲೆ ಹರಿಯುವ ಕಾವೇರಿ ನದಿಯು ಸೃಷ್ಟಿಸುವ ಮುತ್ತಿನಂತಹ ನೀರಿನ ಸಿಂಪಡಣೆಯಿಂದ ಗ್ರಾಮದ ಹೆಸರು ಹುಟ್ಟಿಕೊಂಡಿದೆ ಎನ್ನಲಾಗುತ್ತದೆ.

ಸ್ಥಳೀಯ ಭೌಗೋಳಿಕ ಹಾಗೂ ಅಧ್ಯಾತ್ಮಿಕ ಸಿದ್ಧಾಂತದ ಪ್ರಕಾರ, ಈ ಗ್ರಾಮವು ಬಟ್ಟೆ ಒಗೆಯಲು ಮತ್ತು ನದಿಯಲ್ಲಿ ಸ್ನಾನ ಮಾಡಲು ಜನಪ್ರಿಯ ಸ್ಥಳವಾಗಿರುವುದರಿಂದ ಇದು "ತೊಳೆಯುವುದು" ಎಂಬರ್ಥದ "ಮುತಾ" ಎಂಬ ಕನ್ನಡ ಪದದಿಂದ ಬಂದಿದೆ ಎಂದು ಕೆಲವರು ಹೇಳುತ್ತಾರೆ. ಇನ್ನೂ ಕೆಲವರು ಈ ಹೆಸರನ್ನು ಸಂಸ್ಕೃತ ಪದ "ಮೋಕ್ಷತಿ"ಯಿಂದ ಪಡೆಯಲಾಗಿದೆ ಎಂದು ನಂಬುತ್ತಾರೆ, ಇದರರ್ಥ "ಮೋಕ್ಷ". ಕಾವೇರಿ ನದಿಯನ್ನು ಅನೇಕರು ಪವಿತ್ರವೆಂದು ಪರಿಗಣಿಸುತ್ತಾರೆ ಮತ್ತು ಮುತ್ತತ್ತಿಯಲ್ಲಿ ನದಿಯಲ್ಲಿ ಸ್ನಾನ ಮಾಡುವುದರಿಂದ ಮೋಕ್ಷವನ್ನು ಸಾಧಿಸಲು ಹತ್ತಿರವಾಗಬಹುದು ಎಂದು ನಂಬುತ್ತಾರೆ.

ಐತಿಹ್ಯವೊಂದರ ಪ್ರಕಾರ, ಮೈಸೂರು ಮಹಾರಾಜರು ಭೇಟೆಯಾಡುತ್ತಿದ್ದ ಅರಣ್ಯಸೀಮೆ ಇದಾಗಿತ್ತು. ರಾಜರು ಬೇಟೆಯಾಡುವಾಗ ತಮ್ಮೊಂದಿಗೆ ಕರೆದೊಯ್ಯುತ್ತಿದ್ದ ಬೇಟೆನಾಯಿಗಳಲ್ಲಿ 'ಮುತ್ತು' ಎಂಬ ನಾಯಿಯೂ ಇತ್ತು. ಇದು ಹುಲಿಗಳಿರುವ ನೆಲೆಗಳನ್ನು ಚೆನ್ನಾಗಿ ವಾಸನೆ ಹಿಡಿಯುವ ಮೂಲಕ ಬೇಟೆಗೆ ಸಹಕರಿಸುತ್ತಿತ್ತಂತೆ. ಹೀಗಾಗಿ, ಈ ಪ್ರದೇಶದಲ್ಲಿ 'ಮುತ್ತು' ನಾಯಿಯು ಬೇಟೆಯಾಡಲು ಸಹಕಾರಿಯಾದುದಕ್ಕೆ ಈ ಸ್ಥಳಕ್ಕೆ 'ಮುತ್ತತ್ತಿ' ಎಂಬ ಹೆಸರಿಡಲಾಯಿತು ಎನ್ನುತ್ತಾರೆ.

ಸ್ಥಳೀಯ ಜಾನಪದ ಕಥೆಯೊಂದರಲ್ಲಿ ಬರುವಂತೆ, 'ಮುತ್ತತ್ತಿ' ಎಂಬ ಹೆಸರಿನ ಮೂಲವು ಒಬ್ಬ ಹೆಣ್ಣಿಗೆ ಸಂಬಂಧಿಸಿದ್ದಾಗಿದೆ. ಕಥೆಯ ಪ್ರಕಾರ, ಮುತ್ತತ್ತಿ ಎಂಬ ಯುವತಿಯು ಬೇರೆ ಜಾತಿಗೆ ಸೇರಿದ ರಾಜಕುಮಾರನನ್ನು ಪ್ರೀತಿಸುತ್ತಿದ್ದಳು. ಆಕೆಯ ಕುಟುಂಬವು ಅಂತರ್ಜಾತಿ ಪ್ರೀತಿಯನ್ನು ವಿರೋಧಿಸಿತು ಮತ್ತು ಮುತ್ತತ್ತಿ ಗ್ರಾಮವನ್ನು ತೊರೆಯುವಂತೆ ಒತ್ತಾಯಿಸಲಾಯಿತು. ಆಕೆಯು ತನ್ನೂರಿನಲ್ಲಿ ಹರಿಯುತ್ತಿದ್ದ ಕಾವೇರಿ ನದಿಯ ದಂಡೆಗೆ ಬಂದು ಕಣ್ಣೀರು ಹಾಕುವಾಗ, ಮುತ್ತತ್ತಿಯ ಮೇಲಿನ ಪ್ರೀತಿಯಿಂದ ಕಾವೇರಿ ನದಿಯು ಎಷ್ಟು ಮುದುಡಿಹೋಯಿತು ಎಂದರೆ, ಮುತ್ತತ್ತಿಯ ಗೌರವಾರ್ಥವಾಗಿ ಮುತ್ತಿನಂತಹ ನೀರಿನ ಹನಿಗಳನ್ನು ನದಿಯು ಸಿಂಪಡಿಸಲು ಪ್ರಾರಂಭಿಸಿತು. ಹೀಗಾಗಿ ಆ ಗ್ರಾಮಕ್ಕೆ ಮುತ್ತತ್ತಿಯ ಹೆಸರೇ ಬಂದಿತು ಎನ್ನುತ್ತಾರೆ. ಹೀಗೆ, 'ಮುತ್ತತ್ತಿ' ಸ್ಥಳವನ್ನು ಕುರಿತಾಗಿ ಸಾಂಸ್ಕೃತಿಕ, ಸಾಮಾಜಿಕ, ಐತಿಹಾಸಿಕ, ಭಾಷಿಕ, ಭೌಗೋಳಿಕ, ಧಾರ್ಮಿಕ, ಪೌರಾಣಿಕ ಹಾಗೂ ಅಧ್ಯಾತ್ಮಿಕ ಹಿನ್ನೆಲೆಯಲ್ಲಿ ಸ್ವಾರಸ್ಯಕರವಾದ ಸಂಗತಿಗಳಿರುವುದು ಕಂಡುಬರುತ್ತದೆ.

ಪ್ರತಿ ವರ್ಷವೂ ಶ್ರಾವಣ ಮಾಸದಲ್ಲಿ ನಡೆಯುವ "ಮುತ್ತೆತ್ತರಾಯನ ಜಾತ್ರಾ ಮಹೋತ್ಸವ"ವು ಸರ್ವಜನಾಂಗದ ಸಮಾಗಮದಲ್ಲಿ ಅತ್ಯಂತ ಉತ್ಸಾಹ ಮತ್ತು ಭಕ್ತಿಯಿಂದ ನಡೆಯುವುದು ವಿಶೇಷವಾದ ಸಂಗತಿ. ಒಂದು ಜಾತಿ, ಒಂದು ಧರ್ಮ, ಒಂದು ಭಾಷೆ ಅಥವಾ ಒಂದು ಪ್ರದೇಶದ ಜನರು ಮಾತ್ರವಲ್ಲದೇ ವಿವಿಧ ಜಾತಿ, ಮತ, ಧರ್ಮ, ಭಾಷೆ, ಪ್ರದೇಶಗಳ ಜನರು ಸಾಮೂಹಿಕವಾಗಿ ಸಾಮರಸ್ಯದಿಂದ ಪಾಲ್ಗೊಳ್ಳುವ ಮೂಲಕ ಹನುಮಂತರಾಯನ ಉತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ. ನಾಲ್ಕೆöÊದು ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವದ ಸೇವಾರ್ಥದಾರರಾಗಿ ಒಂದೇ ಸಮುದಾಯದವರು ಮಾತ್ರವೇ ಇರುವುದಿಲ್ಲ. ಹೂವಿನ ಅಲಂಕರಣ, ಹಾಲರವಿ ಸೇವೆ, ಹುಲಿವಾಹನ ಉತ್ಸವ, ಪಲ್ಲಕ್ಕಿ ಉತ್ಸವ ಮೊದಲಾದುವನ್ನು ವಿವಿಧ ಸಮುದಾಯಗಳು ವಹಿಸಿಕೊಂಡು 'ವೈವಿಧ್ಯತೆಯಲ್ಲಿ ಐಕ್ಯತೆ'ಯನ್ನು ಪ್ರತಿಬಿಂಬಿಸುವ 'ಸಾಮಾಜಿಕ ಸಾಮರಸ್ಯ'ದ ಪೂಜಾಕೈಂಕರ್ಯವನ್ನು ನಡೆಸುತ್ತಾ ಬರುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ.

'ಆಹಾರ ಸಾಮರಸ್ಯ'ವನ್ನು ಸಾಧಿಸಿರುವ 'ಬ್ಯಾಟಗಾರ ಮುತ್ತಪ್ಪನ ಪ್ರಸಂಗ'ವು ಮನೋಜ್ಞವಾದುದು. (ಇದನ್ನು ಜಾನಪದ ಕಲಾವಿದರಾದ ಕೋನಮಾನಹಳ್ಳಿ ಲಕ್ಷöಮಣ ಸ್ವಾಮಿ ಅವರು ಸೊಗಸಾಗಿ ಹಾಡುತ್ತಾರೆ) ಅರಣ್ಯಸೀಮೆಯಿಂದ ಆವೃತ್ತವಾದ ಮುತ್ತತ್ತಿ ಪ್ರದೇಶದ ಬಹುಪಾಲು ಜನಸಮುದಾಯಗಳ ಆಹಾರ ಸಂಪಾದನೆಯಲ್ಲಿ ಬೇಟೆಯೂ

ಒಂದು ಕ್ರಮ. ಬೇಟೆಗಾರರು ಮುತ್ತಪ್ಪನಲ್ಲಿ ಮೊರೆಯಿಡುತ್ತಾ, 'ನಮಗೆ ಒಳ್ಳೆಯ ಬೇಟೆಯು ದೊರೆಯುವಂತಾದರೆ, ಬೇಟೆಯ ಬಹುಭಾಗವನ್ನು ಮುತ್ತತ್ತಿರಾಯನ ಸೇವೆಗಾಗಿ ನೀಡಲಾಗುವುದು, ಬಹುಜನರಿಗೆ ಮಾಂಸಾಹಾರದ ಅನ್ನಸಂತರ್ಪಣೆ ಮಾಡಲಾಗುವುದು' ಎಂದು ಬೇಡಿಕೊಳ್ಳುತ್ತಾರೆ. ಅವರ ಕೋರಿಕೆಯಂತೆ ಒಳ್ಳೆಯ ಬೇಟೆ ದೊರೆತರೆ, ಅದರಲ್ಲಿ ಮೀಸಲುಭಾಗವನ್ನು ಮುತ್ತತ್ತಿರಾಯನಿಗೆ ಅರ್ಪಿಸಿ, ಭಕ್ತಾದಿಗಳಿಗೆ ಭೋಜನಸೇವೆ ಮಾಡುತ್ತಾರೆ. ಇಂದಿಗೂ ಮುತ್ತತ್ತಿಯಲ್ಲಿ ಸಸ್ಯಾಹಾರಿ ಹಾಗೂ ಮಾಂಸಾಹಾರಿ ಎಂಬ ಭೇದವಿಲ್ಲದೆ ನೈವೇದ್ಯ ಮತ್ತು ಅನ್ನಸಂತರ್ಪಣೆ ನಡೆಯುವುದನ್ನು ಕಾಣಬಹುದಾಗಿದೆ. ಮುತ್ತೆತ್ತರಾಯನಿಗೆ ಇರುವ ಹಲವಾರು ನಾಮಾವಳಿಗಳಲ್ಲಿ 'ಬ್ಯಾಟಗಾರ ಮುತ್ತಪ್ಪ' ಹೆಸರೂ ಪ್ರಸಿದ್ಧವಾದುದಾಗಿದೆ.

ಮುತ್ತೆತ್ತರಾಯನ ಜಾತ್ರಾಮಹೋತ್ಸವದಲ್ಲಿ ಸಾಧ್ಯವಾಗಿರುವ 'ಧಾರ್ಮಿಕ ಸಾಮರಸ್ಯ'ಕ್ಕೆ ಸಂಬಂಧಿಸಿದ ಮಹತ್ವದ ಸಂಗತಿಯೆಂದರೆ ಶೈವ ಮತ್ತು ವೈಷ್ಣವ ಮತಗಳ ಸಾಮರಸ್ಯ. ಶಿಷ್ಟಪರಂಪರೆಯಲ್ಲಿ ಕಾಣದ ಈ ಮತೀಯ ಸಾಮರಸ್ಯವನ್ನು ಜಾನಪದಲೋಕದ ಮಂಟೇಸ್ವಾಮಿ ಮಹಾಕಾವ್ಯದಲ್ಲಿ ಕಾಣುವುದು ವಿಶೇಷ. ಧರ್ಮಗುರುಗಳಾದ ಶ್ರೀಮಂಟೇಸ್ವಾಮಿ ಅವರ ಸೂಚನೆಯಂತೆ ಶಿಷ್ಯ ಸಿದ್ದಪ್ಪಾಜಿ ಅವರು ಮುತ್ತತ್ತಿರಾಯನನ್ನು ಭೇಟಿ ಮಾಡುತ್ತಾರೆ. ಆಗ ಪರಸ್ಪರರು,

**ಇವರು ಅವರಿಗೆ ಶರಣು ಅಂದರು**
**ಅವರು ಇವರಿಗೆ ದಾಸನು ಅಂದರು**

**(ಶ್ರೀಮಂಟೇಸ್ವಾಮಿ ಕಾವ್ಯ; ಪುಟ 129.)**

ಮುತ್ತತ್ತಿರಾಯನ ಕ್ಷೇತ್ರದಲ್ಲಿ ಸಾಧ್ಯವಾಗಿರುವ ಜನಗಳ ಜಾತಿ-ಮತಿ ಸಾಮರಸ್ಯದ ಮಹತ್ವವನ್ನು ಕುರಿತು ಅಚ್ಚರಿಯಿಂದ ಕೇಳುವ ಸಿದ್ದಪ್ಪಾಜಿ ಅವರು,

**ಹುಲಿಯನೂವೆ ಗೋವನೂವೆ**
**ಹೊಂದಕ್ಕೂಡಿ ಮೇಯಿಸುವಂತೆ**
**ಹದಿನೆಂಟು ಜಾತಿಯನ್ನು**
**ಒಂದೇ ಭಾಂಡದಲ್ಲಿ ಅಟ್ಟಣಿಸುವಂತೆ.....**

**(ಶ್ರೀಮಂಟೇಸ್ವಾಮಿ ಕಾವ್ಯ; ಪುಟ 129.)**

ಎನ್ನುತ್ತಾ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಇಬ್ಬರ ಮಾತುಕಥೆಯು ಮುಂದುವರೆದು ಒಬ್ಬರನ್ನೊಬ್ಬರು ಒಳಗೊಳ್ಳುತ್ತಾ, ಪರಸ್ಪರ ಗೌರವಿಸುತ್ತಾ, ಸಾಮರಸ್ಯಪೂರ್ಣವಾದ ಆಚಾರ-ವಿಚಾರಕ್ಕೆ ಒಮ್ಮತಗೊಳ್ಳುತ್ತಾರೆ.

**ಚಿಕ್ಕಲ್ಲೂರಿನಲ್ಲಿ ನಾನು ಇರುತ್ತೀನಿ**
**ಮುತ್ತತ್ತೀಲಿ ನೀನು ಇರು**
**ಆಚೆ ಕರೆಯಲಿ ನಾನು ಇರುತಿನಿ**
**ಈಚೆ ಕರೆಯಲಿ ನೀನು ಇರು**
**ನಾನಿಲ್ಲಿಗೆ ಬಂದುದಕೆ ಗುರುತೇನು ಅಂದ್ರೆ**

**ನಿನ್ನ ನಾಮದ ಭಕ್ತರಿಗೆ**
**ಗೋಕುಲಾಷ್ಟಮಿ ಜಾತ್ರೆ ಆಗುವಾಗ**
**ಕಡೇದಿನ ಸಿದ್ದಪ್ಪಾಜಿ ಸ್ಯಾವೆಯ**
**ನೀ ಮಾಡಸೋ ಮುತ್ತತ್ತಿರಾಯ**
**ಚಿಕ್ಕಲ್ಲೂರಲ್ಲಿ ಜಾತ್ರೆ ಆಗುವಾಗ**
**ನಾನು ಮುತ್ತತ್ತಿರಾಯನ ಸೇವೆ**
**ಕಡೆಬಾಗಲ ಸೇವೆ ಮಣಿಸೇವೆ ಮಾಡಿಸುತೀನಿ**
**ಇಲ್ಲಿ ಏನಪ್ಪ ಅಂದ್ರೆ**
**ನಾನು ಇಲ್ಲಿಗೆ ಬಂದದ್ದಕ್ಕೆ**
**ನಾನು ಭಾವಕಾಣೋ**
**ನೀನೇ ಭಾವಮೈದ ಕಾಣೋ.....**

**(ಶ್ರೀಮಂಟೇಸ್ವಾಮಿ ಕಾವ್ಯ; ಪುಟ 132-33)**

ಹೀಗೆ, ಸಿದ್ಧಪ್ಪಾಜಿ ಹಾಗೂ ಮುತ್ತತ್ತಿರಾಯರಿಬ್ಬರ ಮತ-ಮತಿಗಳ ಸಾಮರಸ್ಯದ ಆಶಯದಂತೆ ಇಂದಿಗೂ ಎರಡೂ ಕ್ಷೇತ್ರಗಳಲ್ಲಿ ನಡೆದುಕೊಳ್ಳಲಾಗುತ್ತಿದೆ. ಜಾನಪದ ವಿದ್ವಾಂಸರಾದ ದಿವಂಗತ ಡಾ.ಜಿ.ಶಂ.ಪರಮಶಿವಯ್ಯ ಅವರು ದಾಖಲಿಸಿದಂತೆ, “ಮಂಟೇಸ್ವಾಮಿಯ ಸಂಪ್ರದಾಯದಲ್ಲಿ ಶೈವ-ವೈಷ್ಣವಗಳ ಸಂಗಮವಿದ್ದಂತೆ ತೋರುತ್ತದೆ. ನೀಲಗಾರರು ಹಿಡಿಯುವುದು ತಂಬೂರಿ. ಇದು ದಾಸ ಪರಂಪರೆಯ ಸಂಕೇತ. ಸಿದ್ಧಪ್ಪಾಜಿಯವರಿಗೆ ಮುತ್ತತ್ತಿರಾಯನಿಂದ ಬಳುವಳಿಯಾಗಿ ಈ ತಂಬೂರಿ ಬಂದಿತು. ಮುತ್ತತ್ತಿರಾಯ ಆಂಜನೇಯ, ಪರಮ ವೈಷ್ಣವ,..” (ಶ್ರೀಮಂಟೇಸ್ವಾಮಿ ಕಾವ್ಯ; ಪುಟ ಫಿ।ಫಿ) ಮುತ್ತತ್ತಿರಾಯನು ತನ್ನ ಮಹಾಗುರುವೆಂದು ಭಾವಿಸಿದ ಪರಮೇಶ್ವರ/ಭೈರವೇಶ್ವರರ ಆರಾಧನೆ ಮುತ್ತತ್ತಿಯಲ್ಲಿದೆ. ಇಂದಿಗೂ 5 ದಿನಗಳ ಕಾಲ ನಡೆಯುವ ಚಿಕ್ಕಲ್ಲೂರು ಜಾತ್ರೆಯಲ್ಲಿ ಕೊನೆಯ ದಿನ ಮುತ್ತೆತ್ತಿರಾಯನ ಸೇವೆ ಅಥವಾ ಕಡೆಬಾಗಿಲ ಸೇವೆ ನಡೆಯುತ್ತದೆ. ಈ ಮೂಲಕ ಶೈವಮೂಲದ ಮಂಟೇಸ್ವಾಮಿ-ಸಿದ್ದಪ್ಪಾಜಿ-ರಾಜಪ್ಪಾಜಿ ಒಕ್ಕಲಿನವರು ವೈಷ್ಣವಮೂಲದ ಮುತ್ತತ್ತಿರಾಯನ ಸೇವೆಯನ್ನು ಶ್ರದ್ಧಾಭಕ್ತಿಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ಚಂದ್ರಮಂಡಲ ಉತ್ಸವದ ಮೂಲಕ ಆರಂಭವಾಗುವ ಚಿಕ್ಕಲ್ಲೂರು ಜಾತ್ರೆಯು ಪೂರ್ಣಗೊಳ್ಳುವುದೇ ಮುತ್ತೆತ್ತಿರಾಯನ ಸೇವೆಯ ಮೂಲಕ. ಇದು ಕನ್ನಡ ನೆಲದಲ್ಲಿ ಶೈವ ಹಾಗೂ ವೈಷ್ಣವ ಮತಗಳ ನಡುವೆ ಸುಮಾರು ಸಾವಿರ ವರ್ಷಗಳಿಂದ ಕಾಪಿಟ್ಟುಕೊಂಡು ಬಂದಿರುವ ಮತೀಯ ಸಾಮರಸ್ಯಕ್ಕೆ ಸಾಕ್ಷೀಭೂತವಾಗಿದೆ. ಜಾತಿ-ಮತ-ಮತಿ-ಧರ್ಮಗಳ ಅಸ್ಮಿತೆಗಳ ತಿಕ್ಕಾಟಗಳು ತಾರಕಕ್ಕೇರಿ ಮನುಷ್ಯ ಮನುಷ್ಯನಿಗೆ ಅಪಾಯಕಾರಿ ಆಗುತ್ತಿರುವ ಸಂದರ್ಭದಲ್ಲಿ, ಜಾನಪದ ಮಹಾಕಾವ್ಯ ವಿಚಾರದಲ್ಲಿ ಮಾತ್ರವಲ್ಲದೇ, ನೀಲಗಾರರು ಹಾಗೂ ಮುತ್ತತ್ತಿರಾಯನ ಒಕ್ಕಲಾದ ದಾಸಯ್ಯಗಳ ಸಂಸ್ಕೃತಿ-ಆಚಾರಗಳಲ್ಲಿ ಶೈವ-ವೈಷ್ಣವ ಮತ-ಮತಿಗಳ ಸಾಮರಸ್ಯವು ಜೀವಂತವಾಗಿ ಕಂಡುಬರುವುದು ಮಾನವತೆಗೆ ಮಾಗದರ್ಶಿಯಾಗಿದೆ.

## ಪರಾಮರ್ಶನ ಗ್ರಂಥಗಳು:


1. ಪರಮಶಿವಯ್ಯ ಜೀ. ಶಂ. (ಸಂ). (1973). ಶ್ರೀ ಮಂಟೇಸ್ವಾಮಿ ಮಹಾಕಾವ್ಯ. ಸಾಹಿತ್ಯ ಸದನ. ಮೈಸೂರು.
2. ಮುತ್ತತ್ತಿ ಮುತ್ತಪ್ಪನ ಕಥೆ ಭಾಗ - 1 ತಂಬೂರಿ ಶೈಲಿ | | Konamanahalli Lakshmana Swamy: https://youtu.be/6SUui9tE5Hc?si=W42GePI2a83v3nPj
3. ಮುತ್ತತ್ತಿ ಮುತ್ತಪ್ಪನ ಕಥೆ ಭಾಗ - 2 ತಂಬೂರಿ ಶೈಲಿ |Konamanahalli Lakshmana Swamy: https://youtu.be/-e1D_HAeTk8?si=3lNjpzinsOoMCziX
4. ಪೂರ್ಣ ಹಾಡಿಗಾಗಿ ನೋಡಿ: Eththalo Maayavaada Lyrical| Dr.Rajkumar, Upendrakumar: https://youtu.be/yNFCVEwKIZA?si=wGE4h7uZbtW0Fk2y
5. ಹೆಚ್ಚಿನ ಮಾಹಿತಿಗಾಗಿ ನೋಡಿ: https://www.nativeplanet.com/travel-guide/muthathi-a-place-where-goddess-sita-gave-a-special-name-to-lord-hanuman-check-how-007903.html
6. ವಕ್ತೃ ಸಂದರ್ಶನ: ಡಾ.ಪ್ರದೀಪ್‌ಕುಮಾರ್, ಸಂಶೋಧಕರು ಹಾಗೂ ಪ್ರಾಧ್ಯಾಪಕರು, ಹಲಗೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.